ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಮಾನ್ಯ ಅಧ್ಯಕ್ಷರೇ. ಇದು ಲಾಭ ನಷ್ಟದ ಪ್ರಶ್ನೆ ಅಲ್ಲ. ೩ ಲಕ್ಷ ಲೀಟರ್ ಹಾಲನ್ನು ನಾವು ಸಂಸ್ಕರಣ ಮಾಡುವುದಕ್ಕೆ ಸಾಮರ್ಥ್ಯ ಇಲ್ಲದೇ ಇರುವಾಗ, ವಿತರಣೆ ಮಾಡುವುದಕ್ಕೆ ಯೋಜನೆ ಕಾರ್ಯಗತವಾಗದೇ ಇರುವಾಗ, ಇಷ್ಟು ಹಾಲನ್ನು ಹೊಳೆಗೆ ಹಾಕತಕ್ಕದ್ದು ಸರಿಯಲ್ಲ. ಸಂಸ್ಕರಣ ಯೋಜನೆ ತಯಾರಿದ್ದು, ವಿತರಣೆ ಸಾಧ್ಯವಿದ್ದರೆ ಈ ಹಾಲನ್ನು ರಕ್ಷಣೆ ಮಾಡಬಹುದಿತ್ತು. ಅದರ ಬದಲು ಒಂದು ರೂಪಾಯಿ, ಎರಡು ರೂಪಾಯಿ ಕೊಟ್ಟರೂ ಕೂಡ ರೈತರಿಗೆ ಉಪಯೋಗಕ್ಕೆ ಬರುತ್ತದೆ ಎನ್ನುವ ದೃಷ್ಟಿಯಿಂದ ರಜೆಯನ್ನು ಸ್ವಲ್ಪ ಕಾಲದಲ್ಲಿ ಮಾತ್ರ ಘೋಷಿಸಲಾಗುತ್ತದೆ. ಬೇಸಿಗೆಯಲ್ಲಿ ಪುನಃ ರಜೆ ಘೋಷಿಸುವ ಪ್ರಶ್ನೆಯೇ ಬರುವುದಿಲ್ಲ.

ಈಗ ೧೫ ದಿವಸಗಳಿಂದ ರಜೆಯನ್ನು ಘೋಷಣೆ ಮಾಡುತ್ತಾ ಇಲ್ಲ. ಅನಿವಾರ್ಯವಾದಾಗ ಮಾತ್ರ, ಬೇರೆ ಮಾರ್ಗವಿಲ್ಲದೆ ಮಾಡುತ್ತಿದ್ದೇವೆಂಬುದನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಈಗಾಗಲೇ ಮಿಲ್ಕ್ ಪೌಡರ್ ಯೂನಿಟ್ ಹಾಗೂ ಸಂಸ್ಕರಣ ಕೇಂದ್ರವನ್ನು ಮಾಡುತ್ತೇವೆಂದು ಹೇಳಿದಿರಿ. ಇವುಗಳನ್ನು ತಕ್ಷಣ ಮಾಡಿದರೆ, ಈ ಸಮಸ್ಯೆ ತಪ್ಪುತ್ತದೆ. ಸ್ವಲ್ಪ ಕಾಲದಲ್ಲಿ ಹೆಚ್ಚು ಹಾಲು ಸಿಗುತ್ತದೆ. ಆದ್ದರಿಂದ ಬರುವ ಸ್ವಲ್ಪ ಕಾಲದ ಹೊತ್ತಿಗಾದರೂ ಇಂತಹ ಕೆಲಸಗಳಿಗೆ ಕೈಹಾಕುವುದಿಲ್ಲವೆಂದು ಆಶ್ವಾಸನೆ ಕೊಟ್ಟರೆ ಸಾಕು.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಈಗಾಗಲೇ ನಾವು ಕೋವಾ ಹೆಚ್ಚು ಮಾಡುವ ಸಾಮರ್ಥ್ಯವನ್ನು ಪಡೆದಿದ್ದೇವೆ. ಒಣಗಿಸಿದ ಪೌಡರ್ ಮಾಡತಕ್ಕಂಥಾದ್ದು ಎಕ್ಸ್‌ಪ್ಯಾ ಆಗಿದೆ. ಬೇರೆ ರಾಜ್ಯಗಳಲ್ಲಿ ಆಗಿರುವುದಕ್ಕಿಂತ ಹೆಚ್ಚು ಸಾಮರ್ಥ್ಯವನ್ನು ನಾವು ಹೊಂದಿದ್ದೇವೆ. ಬಲ್ಕ್ ವೆಂಡಿಂಗ್ ಬೂತ್‌ಗಳನ್ನು ವಿಸ್ತರಣೆ ಮಾಡಿ, ಯೋಜನಾಬದ್ಧವಾಗಿ ಅಲ್ಲಿ ವಿತರಣೆ ಮಾಡುತ್ತಿದ್ದೇವೆ. ಇದೂ ಕೂಡ ಎಕ್ಸ್‌ಪ್ಯಾ (ವಿಸ್ತಾರ) ಆಗಿದೆ. ಕೋವಾವನ್ನು ಮಾನ್ಯ ಸದಸ್ಯರೂ ತಿಂದಿದ್ದಾರೆ, ರುಚಿ ಕೂಡ ಚೆನ್ನಾಗಿದೆ. ಕೋವಾ ಹೆಚ್ಚು ಮಾಡುವುದಕ್ಕೆ ಅವರು ಹೇಳಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು, ನಮ್ಮ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡುತ್ತೇನೆ.

ಖಾಸಗಿ ಕಾರ್ಯಕಲಾಪಗಳು

ಅಧ್ಯಕ್ಷರು. ೧೫ನೇ ಫೆಬ್ರುವರಿ ಒರಂದು ಶ್ರೀ ಕೆ. ಪಿಚ್. ಶ್ರೀನಿವಾಸರಾವರಿಂದ ಮಂಡಿಸಲಾದ ನಿರ್ಣಯದ ಮೇಲೆ ಚರ್ಚೆ ಮುಂದುವರಿಯುವುದು. ಈಗ ಮಾನ್ಯ ಎಸ್.ಕೆ. ಕಾಂತಾ ಅವರು ಮಾತನಾಡಲಿ ಆನಂತರ ಮಾನ್ಯ ವೆಂಕಟರಾಮಯ್ಯನವರು ಮಾತನಾಡಲಿ.

ಶ್ರೀ ಎಸ್. ಕೆ. ಕಾಂತಾ(ಗುಲ್ಬರ್ಗಾ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ. ಪಿಚ್. ಶ್ರೀನಿವಾಸರಾವರು ಮಂಡಿಸಿರುವ ಮದ್ಯಪಾನಕ್ಕೆ ಸಂಬಂಧಿಸಿದ ಒಂದು ಖಾಸಗಿ ನಿರ್ಣಯ ಸಭೆಯ ಮುಂದೆ ಇದೆ. ಮದ್ಯಪಾನದ ಕೆಲವು ನೀತಿಗಳಿಂದ ಬಡಜನರಿಗೆ ಕಾರ್ಮಿಕರಿಗೆ, ರೈತರಿಗೆ ಮತ್ತು ರೈತಕಾರ್ಮಿಕರಿಗೆ ಬಹಳ ತಾಪ ಪೊಡೆತ ಬೀಳುತ್ತಾ ಇರುವುದು ತಮಗೂ ಗೊತ್ತಿದೆ. ತಾವೂ ಕೂಡ ಮದ್ಯಪಾನ ವಿರೋಧಿ ಇರಬೇಕೆಂದು ತಮ್ಮ ಮುಖ ನೋಡಿದರೆ ನನಗನಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಈಗ ಸೇಂದಿ ಗಿಡಗಳು ಹೆಚ್ಚಿಗೆ ಇಲ್ಲದಿದ್ದರು ಕೂಡ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಕೆಲವು ಗಿಡಗಳು ಮಾತ್ರ ಇವೆ. ಮೂರು ವರ್ಷಗಳಿಂದ ೨೭ ಲಕ್ಷಕ್ಕೆ ಹರಾಜು ಆಗುತ್ತಿತ್ತು. ಇವತ್ತಿನ ದಿವಸ ಅದು ೫೫ ಲಕ್ಷಕ್ಕೆ ನಿಂತಿದೆ. ಇವತ್ತು ಗಿಡಗಳು ಇಲ್ಲ, ಸೇಂದಿ ಬರುವುದು ಕೂಡ ಇಲ್ಲ. ಆದರೆ ಪಾರಾಟ ಮಾತ್ರ ಪಾಗೆಯೇ ನಡೆದುಕೊಂಡು ಬರುತ್ತಿದೆ, ಇದನ್ನು ಇವತ್ತು ವಿಚಾರ ಮಾಡಬೇಕಾಗಿದೆ. ಈಗ ಒಂದು ಡಿಪೋ ಇದ್ದರೆ, ಅಲ್ಲಿ ಅವರಿಗೆ ನೀರು ಬೇಕು, ಕ್ಲೋರಲ್ ಹೈಡ್ರೇಟ್ ಬೇಕು ಕೆವಿಕಲ್ಸ್ ಬೇಕು ಷುಗರ್ ಬೇಕು, ನೀರು ಹಾಕಿ ಕಲಿಸುವುದಕ್ಕೆ ಕೆಲವು ಜನರು ಬೇಕು. ಹೀಗೆ ಕಲೆಸಿ, ಜನರಿಗೆ ಪಾರಾತಕ್ಕಂತ ವ್ಯವಸ್ಥೆ ಬೆಂದಿನಿಂದ ಬಂದಿರತಕ್ಕಂತ ವ್ಯವಸ್ಥೆ ಇವರಿಂದ ಕುಡಿಯುವ ಜನರಿಗೆ, ಆರೋಗ್ಯದಮೇಲೆ ಸಾಕಷ್ಟು ದಾಳಿಯಾಗಿದೆ. ವಿಧಾನಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ, ಪಾರ್ಲಿಮೆಂಟಿನಲ್ಲಿ ನಾವು ಭಾಷಣಮಾಡುತ್ತೇವೆ. ಬಡರೈತರಿಗೆ, ಕಾರ್ಮಿಕರಿಗೆ ರೈತರಿಗೆ ರೈತ ಕಾರ್ಮಿಕರಿಗೆ ಒಳ್ಳೆಯ ಆರೋಗ್ಯ ಬೇಕಾ, ಅವರು ಸುಧಾರಿಸಬೇಕು, ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು ಎನ್ನತಕ್ಕಂತ ಮಾತನ್ನು ದಿನೇ ದಿನೇ ಆಡುತ್ತಿದ್ದೇವೆ. ಇಂತಹ

೧-೦೦ ಪಿ. ಎಂ.

ಮಾತನಾಡುವಾಗ ಇವತ್ತಿನ ದಿವಸ ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕಂಥವರನ್ನು ನಾವು ನೋಡಬಹುದು, ಹೈದ್ರಾಬಾದ್‌ನಲ್ಲಿ ನೋಡಬಹುದು, ಗುಲ್ಬರ್ಗಾದಲ್ಲಿ ನೋಡಬಹುದು, ಬೆಂಗಳೂರಿನಲ್ಲಿ ನೋಡಬಹುದು, ಯಾವುದೇ ಊರಿನ ಫ್ಯಾಕ್ಟರಿಯಲ್ಲಿ ನೋಡಬಹುದು, ಅವರು ಫ್ಯಾಕ್ಟರಿಯಲ್ಲಿ ಕೆಲಸ ಮುಗಿದ ನಂತರ ನೇರವಾಗಿ ಸೇಂದಿ ಅಂಗಡಿಗೆ ಹೋಗುತ್ತಾರೆ. ಸಾರಾಯಿ ಅಂಗಡಿಗೆ ಹೋಗುತ್ತಾರೆ, ಕುಡಿದುಕೊಂಡು ರಾತ್ರಿ ೧೧ ಗಂಟೆಗೆ ಮನೆಗೆ ಹೋಗುತ್ತಾರೆ. ಅವರು ಊಟ ಇತ್ತು ಎಂದರೆ ಊಟ ಮಾಡುತ್ತಾರೆ ಇಲ್ಲ ಎಂದರೆ ಹಾಗೆಯೇ ಮಲಗಿಕೊಳ್ಳುತ್ತಾರೆ. ಮತ್ತೆ ಬೆಳಿಗ್ಗೆ ಎಚ್ಚರ ಆಯಿತು ಎಂದರೆ ಫ್ಯಾಕ್ಟರಿಗೆ ಹೋಗುತ್ತಾರೆ ಇಲ್ಲದಿದ್ದರೆ ಆಬ್ಸೆಂಟ್ ಆಗುತ್ತಾರೆ. ಏನೆಂದರೆ ಮುಖ ತೊಳೆಯದೆ ಫ್ಯಾಕ್ಟರಿಗೆ ಹೋಗುತ್ತಾರೆ. ಇದರಿಂದ ಫ್ಯಾಕ್ಟರಿಯಲ್ಲಿ ಒಳ್ಳೆ ರೀತಿಯಿಂದ ಕೆಲಸ ಆಗುವುದಿಲ್ಲ. ಪ್ರೊಡಕ್ಷನ್ ಹಾನಿಯಾಗುತ್ತದೆ. ಇಪತ್ತು ಫ್ಯಾಕ್ಟರಿಯಲ್ಲಿ ಆಬ್ಸೆಂಟಿಸಮ್ ಜಾಸ್ತಿಯಾಗುತ್ತಾ ಇದೆ. ಅದು ೨೭ ಪರ್ಸೆಂಟ್ ಆಗಿದೆ. ಬೆಂಗಳೂರಿನಂತಹ ಊರಿನಲ್ಲಿ ವಿಚಾರವಂತ ಕಾರ್ಮಿಕರು ಇರತಕ್ಕಂಥ ಊರಿನಲ್ಲಿಯೇ ಶೇಕಡ ೨೦ ರಿಂದ ೨೨ ರಷ್ಟು ಆಬ್ಸೆಂಟಿಸಮ್ ಆಗುತ್ತಿದೆ. ಇದರ ಬಗ್ಗೆ ವಿಚಾರ ಮಾಡುವಾಗ ಕೆಲವರು ಹೇಳುತ್ತಾರೆ. ಇ.ಎಸ್.ಐ. ಸ್ಕೀಮ್ ಇಂಟ್ರಡ್ಯೂಸ್ ಮಾಡಿರುವುದರಿಂದ ಈ ಆಬ್ಸೆಂಟಿಸಮ್ ಜಾಸ್ತಿಯಾಗುತ್ತಿದೆ ಎಂಬ ವಿಚಾರಗಳು ಕೂಡ ಇದ್ದಾವೆ. ಇದೆಲ್ಲದಕ್ಕೂ ಮೀರಿ ಆಬ್ಸೆಂಟಿಸಮ್ ಆಗುವುದಕ್ಕೆ ಕಾರಣ ಏನು ಎಂದರೆ ಕೇವಲ ಕುಡುಕತನ ಸಾರಾಯಿ ಮತ್ತು ಸೇಂದಿಯನ್ನು ಕುಡಿಯುವುದರ ಅಭ್ಯಾಸದ ಬಗ್ಗೆ ಒಂದು ವಿಚಾರ ಸಂಕಿರಣ ಮಾಡಿದರೆ ನಮಗೆ ಏನೆನ್ನಿಸುತ್ತದೆ ಎಂದರೆ, ಈ ಕುಡಿತ ಜನರನ್ನು ಬಡವರನ್ನಾಗಿ ನಿರ್ಗತಿಕರನ್ನಾಗಿ ಮಾಡತಕ್ಕ ವ್ಯವಸ್ಥೆ ಇದೆ ಎನ್ನತಕ್ಕ ವಿಚಾರ ನಮ್ಮ ನಿಮ್ಮಲ್ಲಿ ಬರದೆ ಇರಲಾರದು. ಇದರಿಂದ ಕೇವಲ ಒಂದೆರಡು ನೂರು ಕೋಟಿ ರೂಪಾಯಿಗಳನ್ನು ರಾಜ್ಯಕ್ಕೆ ಆಥವಾ ಕೇಂದ್ರಕ್ಕೆ ಬರುತ್ತದೆ, ಇದರಿಂದ ಸಹಾಯವಾಗುತ್ತದೆ ಎಂಬ ವಿಚಾರ ಮಾಡಿ ಇದನ್ನು ನಾವು ಮುಂದುವರೆಸಿದರೆ, ಜನರ ಆರೋಗ್ಯ ಏನಾಗಬಹುದು, ಅವರ ಆರ್ಥಿಕ ವ್ಯವಸ್ಥೆ ಏನಾಗಬಹುದು ಎಂಬುದನ್ನು ವಿಚಾರಮಾಡಿದರೆ ದಿನನಿತ್ಯ ನಾವೊ ನೀವು ಸ್ಟೈಕ್‌ನಲ್ಲಿ ಒಂದಿಲ್ಲ ಒಂದು ಬೇಡಿಕೆಗಳ ಮೇಲೆ ಮಾಡುವುದನ್ನು ಕಾಣಬಹುದು ನಾನೂ ಒಬ್ಬ ಕಾರ್ಮಿಕ ಧುರೀಣ ಇದ್ದೇನೆ, ನಾನು ಕಾರ್ಮಿಕ ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕ ಮನುಷ್ಯ ನಮ್ಮಲ್ಲಿ ನೂರಕ್ಕೆ ಐವತ್ತು ಜನರು ಕುಡಿಯುತ್ತಾರೆ, ಅವರ ಸಂಬಳ ಏನೂ ಕಡಿಮೆ ಇಲ್ಲ, ಒಂದು ಕುಟುಂಬದಲ್ಲಿ ನಾಲ್ಕೈದು ಜನ ಕೆಲಸ ಮಾಡುತ್ತಾರೆ, ಅವರಿ ಐದಾರು ಸಾವಿರ ರೂಪಾಯಿಗಳ ಆಧಾಯ ಇದೆ. ಆದರೆ ಅವರ ಪರಿಸ್ಥಿತಿಯನ್ನು ಅವರ ಮನೆಗೆ ಹೋಗಿ ನೋಡಿದಾಗ, ಅವರು ಆದೇ ಜೋಪಡಿ ಇವೆ, ಅದೇ ಪರಿಸ್ಥಿತಿಯಲ್ಲಿ ಅವನು ಕುಡಿದು ಬೀಳುತ್ತಾನೆ, ಅದೇ ಕೆಟ್ಟ ಪರಿಸ್ಥಿತಿ ಇದೆ. ಇದಕ್ಕೆ ಕಾರಣ ಏನೆಂದರೆ ಇವತ್ತಿನ ದಿವಸ, ಮಟಕಾ ಜೂಜು ಮತ್ತು ಈ ಸೇಂದಿ ಮತ್ತು ಸಾರಾಯಿ ಇದರ ಬಗ್ಗೆ ಎಷ್ಟು ಮಾತನಾಡಿದರೂ ಕಡಿಮೆ ಇದೆ. ಉದಾಹರಣೆಗಾಗಿ ಗುಲ್ಬರ್ಗಾ ನಗರದ ಜನರ ಒಂದು ಸೇಂದಿ ಅಂಗಡಿಯನ್ನು ತೆಗೆಯಲ್ಲ ಮನವಿ ಮಾಡಿದ ವಿಚಾರ ಹೇಳುತ್ತೇನೆ. ಗುಲ್ಬರ್ಗಾ ನಗರ ಒಂದು ಐತಿಹಾಸಿಕ ಸ್ಥಳ ಇದು ಅಲ್ಲಿ ಒಂದು ಫೋರ್ಟ್ ಇದೆ, ಇದು ಇಡೀ ಏಷ್ಯಾದಲ್ಲೇ ಎರಡನೆಯದೋ ಮೂರನೆಯದೋ, ಸ್ಥಾನದಲ್ಲಿದೆ ಇದು ಎಂದು ಹೇಳುತ್ತಾರೆ. ಇದು ಏಷ್ಟರ ಮಟ್ಟಿಗೆ ಸರಿ ಇದೆಯೋ ನನಗೆ ಗೊತ್ತಿಲ್ಲ. ಇಂತಹ ಸ್ಥಳದಲ್ಲಿ ಇರತಕ್ಕ ಒಂದು ಸೇಂದಿ ಅಂಗಡಿಯನ್ನು ತೆಗೆಮಹಾಕಬೇಕೆಂದು ಗುಲ್ಬರ್ಗಾದ ನಾಗರೀಕರೆಲ್ಲರೂ ಹತ್ತಾರು ವರ್ಷಗಳಿಂದ ಮನವಿಯನ್ನು ಮಾಡಿದಾಗ, ಹೋದ ವರ್ಷ ಆ ಅಂಗಡಿಯನ್ನು ಅಲ್ಲಿಂದ ತೆಗೆದರು. ತೆಗೆದ ನಂತರ ಆ ಕಾಂಟ್ರಾಕ್ಟರ್‌ಗೆ ಸ್ವಲ್ಪ ಲಾಸ್ ಆಗಿರುಹುದು ಇಡೀ ಗುಲ್ಬರ್ಗಾ ನಗರದ ಜನರ ಮನವಿಯನ್ನು ವಿಚಾರ ಮಾಡಿ, ಅದನ್ನು ತೆಗೆದು ಹಾಕಿದ ನಂತರ ವಿನಾಯಿತು ಎಂದರೆ, ಮೊನ್ನೆ ಮೊನ್ನೆ ಮತ್ತೆ ಅಂಗಡಿಯನ್ನು ಅಲ್ಲಿಗೇ ಕೊಡಲಾಯಿತು. ಸಾವಿರಾರು ಜನರು ಆ ಫೋರ್ಟ್ಸ್ ನೋಡುವುದಕ್ಕೆ ಅಲ್ಲಿಗೆ ಬರುತ್ತಾರೆ. ಪುನಃ ಅಲ್ಲಿ ಮೇನ್ ರೋಡ್‌ನಲ್ಲಿ ಅಂಗಡಿ ಇಟ್ಟಿದ್ದಾರೆ. ಅಲ್ಲಿ ಅಂಗಡಿ ಇರುವುದು ಬೇಡ ಎಂದು ಇಡೀ ಗುಲ್ಬರ್ಗಾ ನಗರದ ಜನರು ಹೇಳುತ್ತಾರೆ. ಸ್ಕೂಲ್ ಮಕ್ಕಳು ಹೇಳುತ್ತಾರೆ, ಹೆಣ್ಣು ಮಕ್ಕಳು ಹೇಳುತ್ತಾರೆ, ದೊಡ್ಡವರು ಹೇಳುತ್ತಾರೆ, ಅವರೂ ಮತ್ತೆ ಅಲ್ಲಿ ಅಂಗಡಿ ಇಡಲು ಲೈಸನ್ಸ್ ಸಿಕ್ಕಿತು. ೮ ತಿಂಗಳ ಸಸ್ಪೆನ್‌ಷನ್ ನಂತರ ಮತ್ತೆ ಅವರಿಗೆ ಲೈಸನ್ಸ್ ಸಿಕ್ಕಿದೆ. ಇದರ ಅರ್ಥ ಏನು ? ಜನರ ವಿಚಾರವನ್ನೂ ಕೂಡಾ ಲೆಕ್ಕ ಮಾಡದೇ, ಜನರ ಬಗ್ಗೆ ಯಾವುದೇ ಕಾಳಜಿಯನ್ನು ಮಾಡದೆ ಇವತ್ತಿನದಿವಸ ಲೈಸನ್ಸ್ ಏನತ್ತೆ ಪಿಗುತ್ತದೆ ಎಂದರೆ ಯಾರಿಗೆ ಸಹಾಯ ಆಯಿತು. ಈ ಒಂದು ಕಾನೂನಿನಿಂದ ಕಾಂಟ್ರಾಕ್ಟರ್‌ಗೆ ಸಹಾಯ ಆಯಿತು. ಇವತ್ತಿನ ದಿವಸ ಯಾವುದೇ ಸೇಂದಿ ಅಂಗಡಿಯನ್ನು ತೆಗೆದುಕೊಳ್ಳಿ, ಅದು ಎಲ್ಲಿರುತ್ತದೆ ಎಂದರೆ ಮೇನ್ ರೋಡಿನಲ್ಲಿಯೇ ಇರುತ್ತದೆ. ಈಗ ರಸ್ತೆಗಳ ಮುಂಭಾಗ

ದಲ್ಲಿ ಬಾರ್‌ಗಳನ್ನು ಮಾಡಿದ್ದಾರೆ. ಅದಕ್ಕೆ ಒಂದು ಶಿಸ್ತು ಇಲ್ಲ. ಬಾರ್‌ಗಳನ್ನು ಮಾಡಬೇಡಿ ಎಂದು ನಾನು ಹೇಳುತ್ತಿಲ್ಲ. ಆದರೆ ಅದು ಮುಚ್ಚಿದ ಪರಿಸರದಿಂದ ಮಾರಾಟ ವಾಗಬೇಕು ರಸ್ತೆಗಳ ಮಧ್ಯದಲ್ಲಿ ಸಾರಾಯಿ ಅಂಗಡಿ ಎಂದು ಬೋರ್ಡ್‌ಗಳು ಹಾಕಿ ಮಾರಾಟ ಮಾಡುತ್ತಿದ್ದಾರೆ. ಕುಡುಕರು ಸಾರಾಯಿ, ಹೆಂಡವನ್ನು ಕುಡಿದು ರಸ್ತೆಗಳಲ್ಲಿ ಬಿದ್ದಿರುತ್ತಾರೆ. ಆಗ ಮನುಷ್ಯನ ನೈತಿಕ ಮಟ್ಟ ಎಲ್ಲಿಗೆ ಹೋಗುತ್ತದೆ ? ಕುಡಿಯುವ ಮನುಷ್ಯನ ಸಂಸಾರಕ್ಕೆ, ಅವನನ್ನೇ ನಂಬಿರುವ ಹೆಂಡತಿ ಮಕ್ಕಳ ಗತಿ ಏನಾಗುತ್ತದೆ ? ಇದು ಯಾರ ಮೇಲೆ ಪರಿಣಾಮವಾಗುತ್ತದೆ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು. ಇವೊತ್ತು ೨೦೦ ಕೋಟಿ ರೂಪಾಯಿಗಳು ಸರ್ಕಾರಕ್ಕೆ ಆದಾಯ ಬರಬಹುದು. ಇದರಿಂದ ಲಕ್ಷಾಂತರ ಕುಟುಂಬಗಳು ಹಾಳಾಗುತ್ತವೆ. ಮನೆಯಲ್ಲಿರೆ ತಕ್ಕಂಥಪರಿಗೆ ಸಮ್ಯಪಷ್ಟತವಾದ ಸೌಕರ್ಯವಿರುವುದಿಲ್ಲ. ಈ ಹೆಂಡ ಮತ್ತು ಸಾರಾಯಿ ಅಂಗಡಿಗಳು ಇರುವುದರಿಂದ ಕಾರ್ಮಿಕರು, ರೈತರು, ಕೂಲಿಕಾರರು ನೇರವಾಗಿ ಕೆಲಸ ಮುಗಿಸಿಕೊಂಡು ಮನೆಗೆ ಹೋಗುವುದಿಲ್ಲ. ಅವರು ಹೆಂಡ ಮತ್ತು ಸಾರಾಯಿ ಅಂಗಡಿಗಳಿಗೆ ಹೋಗಿ ಅಲ್ಲಿ ಚೆನ್ನಾಗಿ ಕುಡಿದುಕೊಂಡು ರಾತ್ರಿ ೧೨ ಗಂಟೆಗೆ ಮನೆಗೆ ಹೋಗುತ್ತಾರೆ. ಈ ಅಂಗಡಿಗಳು ಇಲ್ಲದಿದ್ದರೆ ಬೆಗಟಿಗೆ ಫ್ಯಾಕ್ಟರಿ ಬಿಟ್ಟು ನೇರವಾಗಿ ಮನೆಗೆ ಹೋಗಿ ತನ್ನ ಮಕ್ಕಳು ದಾಲೆಗೆ ಹೋಗಿದ್ದಾರೇ ಇಲ್ಲವೇ ಎನ್ನುವುದನ್ನು ನೋಡಿ ತನ್ನ ಹೆಂಡತಿ ಮತ್ತು ಮಕ್ಕಳ ಯೋಗಕ್ಷೇಮವನ್ನು ಸಹ ಚೆನ್ನಾಗಿ ನೋಡಿಕೊಳ್ಳುತ್ತಾನೆ. ಈ ಹೆಂಡದ ಅಂಗಡಿಗಳಿಂದ ಇನ್ನೂ ಒಂದು ಸಮಸ್ಯೆ ಬರುತ್ತದೆ ಅದೇನೆಂದರೆ ಕಾರ್ಮಿಕನಿಗೆ ಎಷ್ಟು ಹಣ ಬಂದರೂ ಸಾಕಾಗುವುದಿಲ್ಲ, ಇದಕ್ಕೇನು ಮಾಡುತ್ತಾನೆಂದರೆ ಸಾಲ ಮಾಡುವವರು ಮನೆಯಲ್ಲಿ ಇರುವ ಸಾಮಾನುಗಳನ್ನು ಮಾರುವುದು ಸಾಲ ಕೊಟ್ಟವರಿಗೆ ಮುಖ ತೋರಿಸದೇ ಇರುವುದು ಜೊತೆಗೆ ಇನ್ನೂ ನಾನಾ ರೀತಿಯ ಕೆಟ್ಟ ಚಟುಗಳು ಅವನಿಗೆ ಬರುತ್ತವೆ. ಆದ್ದರಿಂದ ಮಾನ್ಯ ಸದಸ್ಯರಾದಂಥ ಕೆ. ಜೆಚ್. ಶ್ರಿ ನಿವಾಸ್ ತಂದಿರತಕ್ಕಂಥ ಮಸಗಿ ನಿರ್ಣಯದಲ್ಲಿ ವಿಚಾರ ಮಾಡತಕ್ಕಂಥ ಅಂಶ ಇದೆ. ಈ ಸಂದರ್ಭದಲ್ಲಿ ನಾನು ಕೆಲವೊಂದು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಮ್ಮ ಕಡೆ ಹೋಳಿ ಹುಣ್ಣಿಮೆ ಆಚರಣೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಈ ರೀತಿ ಬನ್ನು ಜನ ಕುಡಿಯುತ್ತಾರೆ. ಅಲ್ಲಿನ ಕಾಂಟ್ರಾಕ್ಟರ್ ಹೋದವರ್ಷ ಸಾರಾಯಿಯನ್ನು ಕುಡಿಯುವ ಜನರಿಗೆ ಸೀಲ್ ಮಾಡಿದ ಬಾಟಲಿಗಳಲ್ಲಿ ಹಾಕಿ ಕೊಡಬೇಕಾಗಿತ್ತು. ಆದರೆ ಆ ಕಾಂಟ್ರಾಕ್ಟರ್, ಆ ರೀತಿ ಮಾಡಲಿಲ್ಲ. ತನ್ನದೇ ಆದ ಒಂದು ಡಿಪ್ಪೋ ಇಟ್ಟುಕೊಂಡಿದ್ದಾನೆ. ಅಲ್ಲಿ ಸ್ವಂತ ತಾನೇ ಸಾರಾಯಿಯನ್ನು ತಯಾರುಮಾಡಿ ತಮ್ಮದೇ ಆದ ಸೀಲ್ ಮಾಡಿ ಜನರಿಗೆ ಮಾರಾಟ ಮಾಡುತ್ತಿದ್ದ. ಅಲ್ಲಿ ಒಂದು ಯೂನಿಯನ್ ಇದೆ. ಆ ಜನ ಬಂದು ನಮಗೆ ಹೇಳಿದರು. ನಾನು ಮತ್ತು ನನ್ನ ಜೊತೆಯಲ್ಲಿ ಕೆಲವು ಜನರನ್ನು ಕರೆದುಕೊಂಡು ಹೋಗಿ ನೋಡಿದಾಗ ಸರಾಯಿಯನ್ನು ತಮ್ಮದೇ ರೀತಿಯಲ್ಲಿ ಡಿಪ್ಪೋದಲ್ಲಿ ಸಂಗ್ರಹಮಾಡಿದರು, ಈ ವಿಷಯವನ್ನು ಪೋಲೀಸಿನವರಿಗೆ ತಿಳಿಸಿದರೆ ಅವರು ಇದಕ್ಕೆ ನಮಗೂ ಸಂಬಂಧವಿಲ್ಲ ಇದು ಎಕ್ಸೈಸ್‌ನವರಿಗೆ ಸಂಬಂಧಪಟ್ಟಿದ್ದು ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ ಇದು ನಮಗೆ ಸಂಬಂಧಪಡುವುದಿಲ್ಲ ಇದು ಎಕ್ಸೈಜ್ ಬಿಜಿಲೆನ್ಸಿಗೆ ಸಂಬಂಧಪಟ್ಟಿದ್ದು ಎಂದು ಹೇಳುತ್ತಾರೆ. ಈ ರೀತಿ ಒಬ್ಬರ ಮೇಲೆ ಒಬ್ಬರು ಹೇಳಿಕೊಂಡು ಕಡೆಗೆ ಅಲ್ಲಿಗೆ ಅವರು ಬಂದರೂ ಕೂಡ ಪಂಚನಾಮ ಮಾಡಿ ಸಾರಾಯಿಯನ್ನು ಸೀಜ್ ಮಾಡಲು ಯಾರೂ ತಯಾರಾಗಿರುವುದಿಲ್ಲ. ಕೊನೆಗೆ ಅಲ್ಲಿ ನಾವೇ ಕೆಲವು ಜನ ಸೇರಿ ಪಂಚನಾಮ ಮಾಡಿ ಅವರು ಇನ್ನೆಲ್ಲೂ ತೆಗೆದುಕೊಂಡು ಹೋಗುವುದಿಲ್ಲವೆಂದು ಬೇಳಿದಾಗ ಕಳ್ಳತನದಲ್ಲಿ ಮಾರಾಟ ಮಾಡುತ್ತಿದ್ದ ಮಾಲನ್ನು ಸೀಜ್ ಮಾಡಿ ಬಂದೆವು. ಅವನ ಡಿಪ್ಪೋದಲ್ಲಿ ಸುಮಾರು ೧೦ ಲಕ್ಷಲೀಟರ್ ಸಾರಾಯಿಯನ್ನು ಸ್ವತಃ ತಾನೇ ತಯಾರು ಮಾಡಿ ಮಾರಾಟ ಮಾಡುತ್ತಿದ್ದ. ಇದನ್ನು ನಾವು ಹಿಡಿದು ಕೊಟ್ಟ ಮೇಲೆ ಅವನನ್ನು ಜೇಲ್ ಮೇಲೆ ಪೋಲೀಸಿನವರು ಬಿಟ್ಟುಬಿಟ್ಟಿದ್ದಾರೆ. ಅದೇ ಒಂದು ಸಣ್ಣ ಕಿರಾಣಿ ಅಂಗಡಿ ಇಟ್ಟಿರುವವನು ಏನಾದರೂ ತಪ್ಪು ಮಾಡಿದರೆ, ತಕ್ಷಣ ಫುಡ್ ಅಂಡ್ ಸಿವಿಲ್ ಸಪ್ಲೈಯವರು ಬಂದು ಕೇಸ್ ಹಾಕುತ್ತಾರೆ, ಅರೆಸ್ಟ್ ಮಾಡುತ್ತಾರೆ ಆದರೆ ಈ ಸಾರಾಯಿ ಅಂಗಡಿಯವರನ್ನು ಯಾರನ್ನೂ ಅರೆಸ್ಟ್ ಮಾಡುವುದಿಲ್ಲ. ಒಂದು ಪಕ್ಷ ಅವರನ್ನು ಅರೆಸ್ಟ್ ಮಾಡಿದರೂ ಬೇಲ್ ಮೇಲೆ ಬಿಟ್ಟು ಬಿಡುತ್ತಾರೆ. ಅವರು ಹೊರಗೆ ಬಂದು ಪುನಃ ಅದೇ ಕೆಲಸವನ್ನು ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಕೆಲವು ಅಧಿಕಾರಿಗಳು ಈ ರೀತಿ ಸರಾಯಿ ಕಂಟ್ರಾಕ್ಟುದಾರರಿಗೆ ಸಹಾಯ ಮಾಡುತ್ತಿದ್ದಾರೆ. ಇಂಥಹ ಪರಿಗೆ ಎಲ್ಲಾ ರೀತಿಯ ನೆರವನ್ನು ಕೊಟ್ಟು ಜನರ ಆರೋಗ್ಯವನ್ನು ಹಾಳು ಮಾಡುವುದಕ್ಕೆ ಅಧಿಕಾರಿಗಳು ಸಹಾಯ ಮಾಡುತ್ತಿದ್ದಾರೆ. ಸಾರಾಯಿ ಜನರ ಆರೋಗ್ಯದ ಮೇಲೆ ಒಂದು ವಿಚಿತ್ರವಾದಂಥ ಪರಿಣಾಮ ಮಾಡುತ್ತದೆಂದು ಹೇಳುತ್ತಿದೆನೆಯೇ ಹೊರತು ಬೇರೆ ಏನಿಲ್ಲ. ತಾಸಕರು ಹೋಗಿ ಅಧಿಕಾರಿಗಳಿಗೆ ಹೇಳಿದಾಗ, ಅವರನ್ನು ದಸ್ತಗಿರಿ ಮಾಡುವುದಕ್ಕೆ ನಮಗೆ ಅಧಿಕಾರ ಇಲ್ಲ ಎಂದು

ಒಂದೊಂದು ಇಲಾಖೆಯವರು ಒಂದೊಂದು ಸಬೂಬು ಹೇಳಿ ಜಾರಿಕೊಳ್ಳುತ್ತಾರೆ. ನಮಗೆ ಸಂಬಂಧ ವೇ ಇಲ್ಲ ಎನ್ನುವ ರೀತಿಯಲ್ಲಿ ಅಧಿಕಾರಿಗಳು ವರ್ತಿಸುತ್ತಾರೆ. ಅಧಿಕಾರಿಗಳಿಗೆ ಯಾರಾದರೂ ಬೇಡವಾದರೆ ಏಂದಾದರೆ ಮಾತ್ರ ಅವರನ್ನು ಹಿಡಿದು ಒಳಗೆ ಹಾಕುತ್ತಾರೆ. ಇದೇ ರೀತಿ ಇನ್ನೊಂದು ವಿಷಯವನ್ನು ಹೇಳುತ್ತೇನೆ. ಒಂದು ತಾಲ್ಲೂಕಿಗೆ ೨೦ ಅಂಗಡಿ ಲೈಸನ್ಸ್‌ನ್ನು ಸರ್ಕಾರದವರು ಕೊಟ್ಟಿದ್ದರೆ ೧೦೦ ಅಂಗಡಿಗಳು ಲೈಸನ್ಸ್ ಇಲ್ಲದೆ ಅನಧಿಕೃತವಾಗಿ ನಡೆಸುತ್ತಿರುತ್ತಾರೆ. ಈ ರೀತಿ ಅನಧಿಕೃತವಾಗಿ ಅಂಗಡಿಗಳು ನಡೆಯುವುದಕ್ಕೆ ಏಕೆ ಅವಕಾಶ ಕೊಡುತ್ತೀರಿ ? ಇವುಗಳನ್ನು ಮುಚ್ಚಿಸಿ ಎಂದು ನಾನು ಎಕ್ಸೈಸ್ ಸೂಪರಿಂಟೆಂಡೆಂಟ್ ರವನ್ನು ಕೇಳಿದರೆ, ಸರ್ಕಾರದ ಮಾಲು ಹೆಚ್ಚಿಗೆ ಮಾರಾಟವಾಗಲಿ ಎನ್ನುವ ಉದ್ದೇಶದಿಂದ ಆ ಅಂಗಡಿ ಗಳನ್ನು ತೆರೆಯುವುದಕ್ಕೆ ಅವಕಾಶ ಕೊಟ್ಟಿದ್ದೇವೆಂದು ಹೇಳುತ್ತಾರೆ. ಈ ತರಹ ಕಾನೂನು ಬಾಹಿರ ಶಾಪ್ಸ್ ಸಾಕಷ್ಟು ಇವೆ. ಇಂಥ ಅಂಗಡಿಗಳಲ್ಲಿ ಸರ್ಕಾರಿ ಸರಾಯಿಯನ್ನು ಮಾರುತ್ತಿಲ್ಲ. ಅವರೇ ತಯಾರು ಮಾಡಿರುವಂಥ ಸರಾಯಿಯನ್ನು ಬಾಟ್ಲಿಗಳಲ್ಲಿ ತುಂಬಿ ಮಾರಾಟ ಮಾಡುತ್ತಿದ್ದಾರೆ. ಇದು ನಮ್ಮ ಕಡೆ ಮಾತ್ರ ನಡೆಯುತ್ತಿದೆ ಎಂದು ಹೇಳುತ್ತಿಲ್ಲ, ಇಡೀ ರಾಜ್ಯದ ಎಲ್ಲಾ ಕಡೆ ಇದೇ ರೀತಿಯ ಅವ್ಯವಹಾರಗಳು ನಡೆಯುತ್ತಿವೆ.

ಮಾನ್ಯ ಅಧ್ಯಕ್ಷರೇ, ಈ ಸಾರಾಯಿ ಮತ್ತು ಸೇಂದಿ ಅಂಗಡಿಗಳನ್ನು ಮುಚ್ಚಿಸಿ ಬಿಟ್ಟರೆ ಬಹಳ ಉತ್ತಮ. ಏಕೆಂದರೆ, ಇದರಿಂದ ಜನರಿಗೆ ಯಾವ ರೀತಿಯ ಲಾಭವು ಆಗದೇ ಬಹಳ ತೊಂದರೆಗೆ ಈಡಾಗುತ್ತಾರೆ. ಒಬ್ಬ ಮನುಷ್ಯನ ಮನಸ್ಸನ್ನು ಸರಿಯಾಗಿದ್ದರೆ ಮಾತ್ರ ಒಳ್ಳೆಯ ಕೆಲಸಗಳನ್ನು ಮಾಡಬಹುದು. ನೀವು ಮತ್ತು ನಾವು ಕೂಡ ಒಳ್ಳೆಯ ಕೆಲಸಗಳನ್ನು ಮಾಡಬೇಕಾದರೆ ಒಳ್ಳೆಯ ಮನಸ್ಸು ಇರಬೇಕಾಗುತ್ತದೆ. ಜನರನ್ನು ಒಳ್ಳೆಯ ಮಾರ್ಗದಲ್ಲಿ ನಡೆಸ ಬೇಕಾದರೆ ಹಾಗೂ ಬಡವರನ್ನು ಉದ್ಧಾರ ಮಾಡಬೇಕೆಂದರೆ, ನಾವು ಕೆಲವೊಂದು ವಿಚಾರಗಳ ಬಗ್ಗೆ ಇವೊತ್ತಿನ ದಿವಸ ಯೋಚನೆ ಮಾಡಬೇಕು. ಆದ್ದರಿಂದ ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ತಂದಿರತಕ್ಕ ಈ ನಿರ್ಣಯದ ಬಗ್ಗೆ ನನ್ನ ಒಮ್ಮತ ಇದೆ. ಇದರ ಬಗ್ಗೆ ಕೆಲವರು ಪರವಾಗಿಯೂ ಮಾತನಾಡಿದ್ದಾರೆ. ವಿರೋಧವಾಗಿಯೂ ಮಾತನಾಡಿದ್ದಾರೆ. ಮಾನ್ಯ ಸದಸ್ಯರಾದ ವೇದಾಂತ ಹೆಮ್ಮಿಗೆಯವರು ಹೇಳಿದರು, ಈ ಕಾಯ್ದೆಯಾಗಿ ಇವತ್ತಿನ ದಿವಸ ಬಂದಿದ್ದಲ್ಲ ಕಾಲಾನು ಕಾಲದಿಂದ ಬಂದಿದೆಯೆಂದು. ಕಾಲಾನುಕಾಲದಿಂದ ಬಂದಿರುವ ವ್ಯವಸ್ಥೆಯನ್ನು ಮುಂದುವರಿಸ ಬೇಕೆಂದು ಯಾವ ನಿಯಮವೂ ಇಲ್ಲ. ಏಕೆಂದರೆ, ಯಾವುದೇ ಕಾಲದಿಂದ ಬಂದಿರತಕ್ಕ ಸಂಪ್ರದಾಯ ಗಳು ಎಲ್ಲಾ ಕಾಲಕ್ಕೂ ಸರಿಯಾಗಿರುವುದಿಲ್ಲ. ನಾವೂ ಸಹ ಯಾವುದು ತಪ್ಪು ಯಾವುದು ಸರಿ ಎಂಬ ಬಗ್ಗೆ ವಿಚಾರ ಮಾಡಬೇಕಾಗಿದೆ. ನಮಗೆ ವಿಚಾರ ಮಾಡತಕ್ಕಂಥ ಶಕ್ತಿ ಇದೆ. ಈ ವಿಚಾರಮಾಡ ತಕ್ಕ ಶಕ್ತಿಯನ್ನು ಜನಸಾಮಾನ್ಯರ ಹಿತಕ್ಕೆ ಬಳಸಿಕೊಳ್ಳಬೇಕು. ಅದು ಬಿಟ್ಟು ಕಾಲಾನುಕಾಲದಿಂದ ಬಂದಿರತಕ್ಕದ್ದು ಎಂದು ಹೇಳಿ ರೆಫೆರೆನ್ಸ್ ಕೊಟ್ಟು ಮುಂದುವರಿಸುವುದು ತಪ್ಪಾಗುತ್ತದೆಂದು ಹೇಳಿ ಈ ವಿಚಾರದಲ್ಲಿ ನಿರ್ಣಯ ಮಾಡತಕ್ಕಂತಾದ್ದು ಸೂಕ್ತವೆಂದು ಮತ್ತೆ ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಡಾ।। ಹೆಚ್.ಎಲ್. ತಿಮ್ಮೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಹೆಚ್. ಶ್ರೀನಿವಾಸ್‌ರವರು ತಂದಿರತಕ್ಕಂಥ ಮಧ್ಯಪಾನಕ್ಕೆ ಸಂಬಂಧಿಸಿದ ನಿರ್ಣಯದ ಬಗ್ಗೆ ನಾನು ಈಗ ಬಹಳ ಹೆಚ್ಚಿಗೆ ಮಾತನಾಡತಕ್ಕಂಥ ಅಗತ್ಯ ಇಲ್ಲ. ಸರಕಾರದಲ್ಲಿ ಈ ಹಿಂದೆ ಮಧ್ಯಪಾನ ನಿಷೇದವನ್ನು ಮಾಡಬೇಕೆಂದು ಕಾನೂನನ್ನು ತಂದು, ಅದನ್ನು ಕಾರ್ಯಗತ ಮಾಡುವುದಕ್ಕೆ ಆಗು ವುದಿಲ್ಲ ಎಂದು ಹೇಳಿ, ಈಗ ಪುನಃ ಇಂಟ್ರಡ್ಯೂಸ್ ಮಾಡಿ, ೨೫೦ ಕೋಟಿ ರೂಪಾಯಿಗಳಷ್ಟು ಆದಾಯ ಇದೆ. ನಿಲ್ಲಿಸುವುದು ಹೇಗೆ ? ಎಂದು ಹೇಳುತ್ತಿದ್ದಾರೆ. ನಾವು ಬಜೆಟ್ ಅಧಿವೇಶನ ಕಾಲದಲ್ಲಿ ನೋಡುತ್ತೇವೆ, ಆ ಕುರಿತು ಸಾಕಷ್ಟು ಚರ್ಚೆ ಇಲ್ಲಿ ನಡೆಯುತ್ತದೆ. ಈ ಬಾಬಿನಿಂದ ಅಂದರೆ ಸೇಂದಿ, ಆರಾಕ್. ಇವುಗಳಿಂದ ೧೨೦-೧೫೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಆದಾಯ ಸರಕಾರಕ್ಕೆ ಬರುತ್ತಿದೆ. ಹಾಗೆಯೇ ಬ್ರಾಂಧಿ, ವಿಸ್ಕಿ ಮುಂತಾದ ಮೆಲ್ಲಟ್ಟದ ಪಾನದಿಂದ ೧೦-೧೨ ಕೋಟಿ ರೂಪಾಯಿಗಳ ಆದಾಯ ಮಾತ್ರ ಬರುತ್ತದೆ. ಮೆಲ್ಲಟ್ಟದ ಪಾನವನ್ನು ದುಡ್ಡು ಇದ್ದವರು, ಶ್ರೀಮಂತರು ಕುಡಿಯುತ್ತಾರೆ. ನಾವು ಬಡವರಿಗೆ ಒದಗಿಸತಕ್ಕಂಥ ಸೇಂದಿ ಮತ್ತು ಆರಾಕ್—ವಿನಿವೆ. ಅದರಲ್ಲಿ ಶುದ್ಧವಾದ ಪೆಂಡ ಸಿಗುವುದಿಲ್ಲ. ಅದಕ್ಕೆ ಕ್ಲೋರಲ್ ಹೈಡ್ರೇಟನ್ನು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕಲಬೆರಕೆ ಮಾಡಿ, ಕುಡಿಯುವವರು ಆರೋಗ್ಯ ಕೆಡುವ ರೀತಿಯಲ್ಲಿ ಮಾಡುತ್ತಾ ಇದ್ದಾರೆ. ಅದೇ ರೀತಿಯಲ್ಲಿ ಆರಾಕ್‌ನಲ್ಲಿಯೂ ಕೂಡ ಸೇರಿಸುತ್ತಾರೆ. ಇಷ್ಟಿಷ್ಟಕ್ಕೆ ಚುನಾವಣೆಗಳಲ್ಲಿಯೂ ಕೂಡ ಸಾಕಷ್ಟು ಸರಬರಾಜು ಮಾಡಿ ಪ್ರಚಾರ ಮಾಡುವುದನ್ನು ನಾವು ನೋಡುತ್ತಾ ಇದ್ದೇವೆ. ಹಿಂದೆ ನಾನು ಒಂದು ಸಲಹೆಯನ್ನು ಸರಕಾರಕ್ಕೆ ಕೊಟ್ಟಿದ್ದೆ. ಪರದೇಶಗಳಲ್ಲಿ ಸಾಮಾನ್ಯವಾಗಿ ನೀರು ಕುಡಿಯುವ ಬದಲು ಬೀರು ಕುಡಿಯುತ್ತಾರೆ. ಹಾಗೆಯೇ ನಮ್ಮಲ್ಲಿಯೂ ಕೂಡ ಒಳ್ಳೆಯ ಗುಣ ಮಟ್ಟವುಳ್ಳ ಬೀರನ್ನು ಕಡಿಮೆ ಬೆಲೆಗೆ ಸಿಗುವಂತೆ ಮಾಡಿದರೆ, ಜನರು ಶೇಂದಿ, ಸಾರಾಯಿಗಳನ್ನು ಕುಡಿಯುವುದನ್ನು ನಿಲ್ಲಿಸಿ, ಇದನ್ನು ಕುಡಿಯಬಹುದು. ಏತಕ್ಕೆ ಅಂದರೆ, ಇದರಲ್ಲಿ ಐದು ಪರ್ಸೆಂಟ್ ಗಿಂತಲೂ ಕಡಿಮೆ ಪ್ರಮಾಣದಲ್ಲಿ ಆಲ್ಕೋಹಾಲ್ ಇರುತ್ತದೆ. ಇದರಿಂದ ತೊಂದರೆ ಆಗುವುದಿಲ್ಲ. ಜನರು ಕುಡಿಯುತಕ್ಕಂತಹ ಚಟುವನ್ನು ಬಿಡಿಸಲಿಕ್ಕೆ ಸಾಧ್ಯವಾಗದಿದ್ದರೆ ಇಂತಹ ಒಂದು ಉಪಾಯವನ್ನು ಕಾರ್ಯರೂಪಕ್ಕೆ ತರುತ್ತೇವೆಂದು. ಮಾನ್ಯ ಜೆ.ಹೆಚ್. ಪಟೇಲ್‌ರವರು ಅಬಕಾರಿ ಮಂತ್ರಿಗಳು ಆಗಿದ್ದಾಗ ಹೇಳಿದ್ದರು. ಬಜೆಟ್ ಅಧಿವೇಶನದ ಭಾಷಣದಲ್ಲಿಯೂ ಕೂಡ ಹೇಳಿದ್ದರು. ಈ ತೆರನಾದ ಅಪಾಯಕಾರಿಯಲ್ಲದ ಒಂದು ವ್ಯವಸ್ಥೆಯನ್ನು ಮಾಡಿದಲ್ಲಿ ನಮ್ಮ ರಾಜ್ಯದ ಬಡವರ, ಕೂಲಿಗಾರರಿಗೆ ಆರೋಗ್ಯ ಕೆಟ್ಟು ಹೋಗತಕ್ಕಂಥ ಒಂದು ಅನಾಹುತ ತಪ್ಪಿಹೋದೀತು ಎಂದು ನಾನು ಭಾವಿಸುತ್ತೇನೆ. ಅವರಿಗಿಂತಲೂ ಅವರ ಹೆಂಡತಿ ಮಕ್ಕಳು ಪಡಬೇಕಾದ ಕಷ್ಟಕಾರ್ಪಣ್ಯಗಳು ಏನಿವೆ ಅವುಗಳನ್ನು ಈ ಮೂಲಕ ತಪ್ಪಿಸಬಹುದು. ಬೀರನ್ನು ಕಡಿಮೆ ದರದಲ್ಲಿ ಮಾರಾಟ ಮಾಡಿ, ಆಗತಕ್ಕಂಥ ನಷ್ಟವನ್ನು ತಪ್ಪಿಸಿಕೊಳ್ಳಬಹುದು. ಇದನ್ನು ಈಗಾಗಲೇ ಮಾನ್ಯ ಜೆ.ಹೆಚ್. ಪಟೇಲ್‌ರವರು ಯೋಚನೆ ಮಾಡುತ್ತಿದ್ದೇವೆ ಎಂದು ಹೇಳಿ, ಇದಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ರಚನೆ ಮಾಡಿ, ಅವರ ಸಲಹೆಗಳನ್ನು ತೆಗೆದುಕೊಂಡು ಈಗ ಆಗತಕ್ಕಂಥ ತೊಂದರೆಯನ್ನು ತಪ್ಪಿಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಮಾನ್ಯ ಸದಸ್ಯರು ಮಧ್ಯಪಾನ ನಿಷೇಧವನ್ನು ತನ್ನಿ ಎಂದು ಹೇಳಿದ್ದಾರೆ. ಇದು ಸಾಧ್ಯವಿಲ್ಲದ ಕೆಲಸ ಆದರೆ ಸರಕಾರದವರು ಈಗ ನಾನು ಹೇಳಿರತಕ್ಕಂಥ ವ್ಯವಸ್ಥೆಯನ್ನು ತಂದರೆ ಅದರಿಂದ ಬಹಳ ಒಳ್ಳೆಯದಾಗುತ್ತದೆ ಎಂದು ನನ್ನ ಅಭಿಪ್ರಾಯವಾಗಿದೆ. ಇಷ್ಟನ್ನು ಹೇಳಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಪೆಂಕಟರಾಮಯ್ಯ.—ಈ ವಿಷಯ ಕುರಿತಾಗಿ ನಾನು ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರ ವಿಚಾರಗಳನ್ನು ಬೆಂಬಲಿಸುತ್ತೇನೆ. ಆದರೆ ಅದು ಆಗುತ್ತದೆಯೋ ಇಲ್ಲವೋ ಎಂಬ ವಿಶ್ವಾಸ ನನಗಿಲ್ಲ. ಏಕೆಂದರೆ, ಮೊದಲಿನ ಕಾಲದಲ್ಲಿ ಜನರು ಯಾರಾದರೂ ಒಬ್ಬ ಕುಡಿದರೆ ಅವನನ್ನು ಕುಡುಕ ಎಂದು ಮೂದಲಿಸುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ. ಈಗ ಕುಡಿಯದೇ ಇದ್ದವರನ್ನು ಮೂದಲಿಸುವ ಹಾಗೆ ಬೆಂದಿದೆ ಎಂದು ಅನ್ನಿಸುತ್ತದೆ. ಈಗ ಕುಡಿಯದಿದ್ದರೆ ಅವನಿಗೆ ಸಮಾಜದಲ್ಲಿ ಬೆಲೆ ಇಲ್ಲದ ಪರಿಸ್ಥಿತಿ ನಿರ್ಮಾಣವಾಗುವ ಹಂತ ತಲುಪುತ್ತಿದೆ. ಕಾರಣ ಕುಡಿಯುವವರ ಸಂಖ್ಯೆ ಜಾಸ್ತಿಯಾಗಿದೆ. ನಾನು ಒಂದು ತೆಲುಗು ಸಿನಿಮಾ ನೋಡಿದ್ದೆ. ಅದರಲ್ಲಿ ಒಂದು ಹಾಡು ಇತ್ತು. ಅದರ ಸಾರಾಂಶ ಏನೆಂದರೆ, ಕುಡಿಯದವರು ಮುಂಡೇ ಮಕ್ಕಳು, ಕುಡಿಯುದೇ ಬದುಕಬಾರದು ಎಂದು. ಮೊದಲು ನಾವು ಲಾಯರಾಗಿದ್ದಾಗ ಚೆನ್ನಾಗಿ ದುಡ್ಡಿದ್ದ ಕಾಲ. ಯಾರದಾದರೂ ದೊಡ್ಡ ಮನುಷ್ಯರ ಕೇಸು ಹ್ಯಾಂಡಲ್ ಮಾಡುವಾಗ ಯಾರಾದರೂ ಕುಡಿದು ವಾದ ಮಾಡಿದರೆ ಭಯವಾಗುತ್ತಿತ್ತು, ಎಲ್ಲಿ ಓಡ್ಕೊಂಡು ಹೋಗಿಬಿಡುತ್ತಾರೋ ಎಂದು. ಅದಕ್ಕೆ ಫಾಸ್ಫೋವಿನ್ ಎಂಬ ಟಾನಿಕ್ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಿದ್ದರು. ನೂರಕ್ಕೆ ಶೇಕಡ್ಕಾ ಜನ ಕುಡಿದರೂ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಈ ಪ್ರಾಹಿಬಿಷನ್ನನ್ನು ಇಂಗ್ಲೆಂಡಿನಲ್ಲಿ ತಂದರು. ಅದು ಫೇಲಾಯಿತು. ಅಮೇರಿಕಾದಲ್ಲೂ ಫೇಲಾಯಿತು, ಕೊನೆಗೆ ಪಬ್ಲಿಕ್‌ನಲ್ಲಿ ಕುಡಿಯಬಾರದು ಎಂದು ನಿಯಮ ಮಾಡಿದರು ರಷ್ಯಾದಲ್ಲಿ ತಂದರು. ಅಲ್ಲೂ ಫೇಲಾಯಿತು. ಕೊನೆಗೆ ಸರ್ಕಾರವೇ ಸ್ಪಾಂಡರ್ಡ್ ಆಫ್ ಲಿಕ್ಕರ್ ಎಂದು ಮಾಡಿದರು. ಈಗ ಮಂಡಲ ಪಂಚಾಯತಿ ಎಲೆಕ್ಷನ್ ಬಂದ ಮೇಲಂತೂ ಮಾಮೂಲಿನ ಪರ್ಸೆಂಟಿಗಿಂತ ಹತ್ತು ಪರ್ಸೆಂಟ್ ಜಾಸ್ತಿ ಕುಡಿದರು. ಒಂದು ಸ್ಟ್ಯಾಟಿಸ್ಟಿಕ್ಸ್ ರೆಪೋರ್ ಮಾಡುವುದಾದರೆ ದೆಲ್ಲಿಯಲ್ಲಿರುವುದಕ್ಕಿಂತ ೮ರಷ್ಟು ಬಾರ್‌ಗಳು ಬೆಂಗಳೂರಲ್ಲಿ ಜಾಸ್ತಿ ಇವೆ. ಆದರೆ ಗಾತ್ರ ವಿಸ್ತೀರ್ಣ ಜನಸಂಖ್ಯೆ ಎಲ್ಲವೆರಲ್ಲೂ ಸಮ್ಮದು ಕಡಿಮೆ ಇರುವ ನಗರ. ಈಗ ಪುನಃ ೨೦೦ ಅಂಗಡಿಗಳನ್ನು ಕೊಡಬಹುದು ಎಂದು ಸರ್ಕಾರ ತೀರ್ಮಾನ ಮಾಡಿದೆ. ಇದಕ್ಕೆ ಸಂಬಂಧಿಸಿದ ರೂಲ್ಸನ್ನು ಅಮೆಂಡ್ ಮಾಡಿದ್ದಾರೆ. ಇದನ್ನಾದರೂ ತಪ್ಪಿಸಬಹುದಾಗಿತ್ತು ನಮ್ಮ ಮಂತ್ರಿಗಳು ಧಯವಿಟ್ಟು ಇದರ ಬಗ್ಗೆ ಯೋಚಿಸಬೇಕು. ಇವರೆಲ್ಲಾ ಗಾಂಧೀವಾದಿಗಳು. ಈಗ ಕುಡಿಯುವುದೇ ಕ್ವಾಲಿಫಿಕೇಷನ್ನು, ಅದು ಡಿಸ್‌ಕ್ವಾಲಿಫಿಕೇಷನಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಗಾಂಧೀವಾದ ಹೋಗಿ ಈಗ ಶೇಂದಿವಾದವಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಲಕ್ಷ್ಮೀಪತಿಯವರು ಪಾನ ಸಂಯಮ ಮಂಡಲಿ ಅಧ್ಯಕ್ಷರು. ಅವರು ಮೊನ್ನೆ ಒಂದು ನಮ್ಮ ಜಾಗದಲ್ಲಿ ನಡೆದ ಫಂಕ್ಷನ್‌ನಲ್ಲಿ ಮಾತನಾಡಬೇಕೆಂದಿದ್ದರು. ಕುಡಿತದ ದುಷ್ಪರಿಣಾಮಗಳನ್ನು ಜನರಿಗೆ ತಿಳಿಸಬೇಕೆಂದಿದ್ದರು. ಅಷ್ಟರಲ್ಲಿ ಇನ್ನೊಬ್ಬ ಮಾಜಿ ಶಾಸಕರು ಅಲ್ಲಿ ಕುಡಿದೇ ಹಾಜರಾದರು. ನಾನೂ ಮಾತನಾಡುತ್ತೇನೆ ಎಂದರು. ನಾವು ಬೇಡ ಎನ್ನುವಂತಿಲ್ಲ ಸುಮ್ಮನಿರುವಂತಿಲ್ಲ. ಕೊನೆಗೆ ಕುಡಿತದ ದುಷ್ಪರಿಣಾಮ ಏನು ಕಣ್ಣಾರೆ ಜನ ನೋಡುವಂತಾಗಲಿ ಎಂದು ಅವರನ್ನು ಬಿಟ್ಟೆವು. ನಾಲ್ಕು ಮಾತಾಡುವಾಗಲೇ ಸುಸ್ತಾದರು. ಕೊನೆಗೆ ನಾಲ್ಕು ಜನ ಕರೆದುಕೊಂಡು ಹೋಗಿ ಅವರನ್ನು ಹೊರಗೆ ಬಿಟ್ಟರು. ಅಲ್ಲಿದ್ದ ತಹಸೀಲ್ದಾರ್ ಬಾಗಿಲು ಹಾಕಿಸಿಬಿಡಿ ಸಾರ್, ಇಲ್ಲದಿದ್ದರೆ ಅವರು ಮತ್ತೆ ಬಂದುಬಿಡ್ತಾರೆ ಎಂದರು. ಅಷ್ಟರಲ್ಲಿ ಪುನಃ ಬಂದು ಭಾಷಣ ಕುಟ್ಟಿದರು. ಇದು ನಮ್ಮ ಸ್ನೇಹಿತರ, ದೊಡ್ಡವರೆನಿಸಿಕೊಂಡವರ ಪರ್ತನೆ.

ಇನ್ನು ಬಡವರು ಕುಡಿಯುವ ಹೆಂಡ ನಿಜವಾಗಿಯೂ ಹೆಂಡವಲ್ಲ, ವಿಷದ ಮೇಲೆ ಹೆಸರು ಆಂಟಿಸಿ ನೀರಿಗೆ ಕ್ಲೋರಿನ್ ಹೈಡ್ರೋಟ್ ಹಾಕಿ ಕುಡಿಸುತ್ತಾರೆ. ಇದರಿಂದ ನರ್ವಸ್ ಡಿಬಿಲಿಟಿ ಬಂದು ಕುಡಿದವನು ಅದಾರುವುದಕ್ಕೆ ಶುರು ಮಾಡಿ ಮಾಡಿ ಒಂದೆರಡು ವರ್ಷದಲ್ಲಿ ಸಾಯುತ್ತಾನೆ. ಜನಕ್ಕೂ ಗೊತ್ತು ಈಗ ನಿಜವಾದ ಹೆಂಡ ಎಲ್ಲೂ ಇಲ್ಲ ಎಂದು. ಆದರೂ ಜನ ಅದನ್ನು ಹೆಂಡ ಎಂದು ಕುಡೀತಾರೆ. ಬೆಂಗಳೂರಿಗೆ ಅದರ ಸುತ್ತಮುತ್ತಲಿಂದ ದಿನಕ್ಕೆ ಸಾವಿರಾರು ಲೀಟರ್ ಕಳ್ಳಭಟ್ಟಿ ಬರುತ್ತದೆ. ಇದನ್ನು ನಾವು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಫ್ಯಾನೆಯಲ್ಲಾದರೂ ಪೀಕ್ಸ್‌ಟಾಗಿ ಕುಡಿದು ಮನೆಯಲ್ಲಿ ಬಿದ್ದಿರುತ್ತಾನೆ. ಆ ಕಾಲದಲ್ಲಿದ್ದ ಕೋಲಾರದಲ್ಲಿ ಪ್ರೊಹಿಬಿಷನ್ ಇದ್ದರೆ ಬೆಂಗಳೂರಿನಲ್ಲಿ ಪ್ರೊಹಿಬಿಷನ್ ಇರಲಿಲ್ಲ ಆಗ ಅಲ್ಲಿಂದ ಇಲ್ಲಿಗೆ ಪೂರೈ ಬಿದ್ದುಕೊಂಡು ಬಂದು ಇಲ್ಲಿ ಕುಡಿಯುತಕ್ಕಂತಹವರು ಇದ್ದರು. ಆಗ ಅಲ್ಲಿ ಅಂಗಡಿ ಇರಲಿಲ್ಲ. ಈಗ ಕೋಲಾರದಲ್ಲಿ ಸುಮಾರು ೨೫ ಸೇಂದಿ ಅಂಗಡಿಗಳು ಇವೆ. ಇದರಿಂದ ೨೬೦ ಕೋಟಿ ರೂಪಾಯಿಗಳು ಬರುತ್ತದೆ ಎಂದು ಲೆಕ್ಕ ಇದೆ. ದುಡ್ಡಿನ ಬಗ್ಗೆ ಹೆಚ್ಚಿಸಿದರೆ ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಬಹಳ ಕೋಪ ಬರುತ್ತದೆ. ನಮ್ಮ ಲೆಕ್ಕದ ಪ್ರಕಾರ ಕಾರು ರಿಪೇರಿ ಮೈನ್‌ಟೆನೆನ್ಸ್‌ಗೆ ೭ ಕೋಟಿ ಆಗುತ್ತದೆ, ೨೬೦ ಕೋಟಿ ರೂಪಾಯಿಗಳು ಮಾತ್ರ ಲಾಭ ಬರುವುದು ಇದರಿಂದ ಏನೂ ಉದ್ಧಾರವಾಗುವುದಿಲ್ಲ. ಜನತೆಗೆ ಇದರಿಂದಾಗಿ ಲಂಚ ಸೃಷ್ಟಿಯಾಗಿರುವುದು ಎಲ್ಲರಿಗೂ ಗೊತ್ತು, ಇದು ಓಪನ್ ಸೀಕ್ರೆಟ್. ನನ್ನ ಸೆಕೆಂಡ್ಸ್ ಎಂದು ಪೂರೈಸುತ್ತಾರೆ. ಮ್ಯಾಕ್‌ಡೌಲ್ ವಿಸ್ಕಿ ಮಾರ್ಕೆಟ್‌ನಲ್ಲಿ ೪೨ ರೂಪಾಯಿಗಳು ಸಿಕ್ಕಿದರೆ ಟ್ಯಾಕ್ಸ್ ಫ್ರೀ ಎಂದು ೫೦ ರೂಪಾಯಿಗಳಿಗೆ ಕೊಡುತ್ತಾನೆ. ೧೦೦ ಬಾಟಲ್ಸ್ ಕೊಟ್ಟರೆ ೫೦೦ ಬಾಟಲ್ಸ್ ಸೆಕೆಂಡ್ಸ್ ಎಂದು ಎಂದರೆ ಟ್ಯಾಕ್ಸ್ ಫ್ರೀ ಎಂದು ಪೂರೈಸುತ್ತಾನೆ. ಆದು ಹೇಗೆ ಪೂರೈಸುತ್ತಾರೋ ಅರ್ಥವಾಗುತ್ತಿಲ್ಲ. ಟೂರಿಸ್ಟ್ ಪ್ರಾಪಿಬಿಷನ್ ಮಾಡಿದರೆ ಬಡವರ ಉದ್ಧಾರವಾಗುತ್ತದೆ ಇಲ್ಲದಿದ್ದರೆ ಆಲ್ಕೋಹಾಲಿನಿಂದ ಬಹಳ ಕೆಟ್ಟ ಪರಿಸ್ಥಿತಿ ಬರುತ್ತದೆ ಆದು ತಮಗೂ ಗೊತ್ತು ಬುದ್ಧಿ ಮಂದೆತೆ, ಜ್ಞಾನ ಇರುವುದಿಲ್ಲ ತಪ್ಪು ತಿಳಿದುಕೊಳ್ಳಬಾರದಿದ್ದರೆ ಒಂದು ಮಾತನ್ನು ಹೇಳುತ್ತೇನೆ, ಅವರಿಗೆ ಮಾನವೀಯತೆ ಕಡಿಮೆಯಾಗಿ ಮೃಗೀಯತೆ ಬರುತ್ತದೆ ಅದರಲ್ಲಿ ಅನುಮಾನವೇ ಇಲ್ಲ. ಚೈನಾದಲ್ಲಿ ಯಾರಾದರೂ ಒಬ್ಬ ಸತ್ತು ನಿಮ್ಮ ತಂದೆಗೆ ಇದ್ದರೆ ಅವನ ಮಗನಿಗೆ ಕುಡಿಯುವುದನ್ನು ಕಲಿಸಿ, ಆಗ ಅವನು ಹಾಳಾಗಿ ಹೋಗುತ್ತಾನೆ ಮತ್ತು ಅವರ ಅಪ್ಪನು ಹಾಳಾಗಿ ಹೋಗುತ್ತಾರೆ ಎಂಬ ಪದ್ಧತಿ ಇತ್ತು. ಇತ್ತೀಚೆಗೆ ನಮ್ಮ ಯುವಕರಲ್ಲಿ ಹಿರಾಯಿನ್ ಮುಂತಾದವನ್ನು ತೆಗೆದುಕೊಳ್ಳುವುದು ಜಾಸ್ತಿಯಾಗುತ್ತಿದ್ದು ಅವರೂ ಹಾಳಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಪ್ರೊಹಿಬಿಷನ್ ಟೂರಿಸ್ಟ್ ಬ್ಯಾನ್ ಮಾಡಿದರೆ ಜನರು ಉದ್ಧಾರವಾಗುತ್ತಾರೆ ಇಲ್ಲದಿದ್ದರೆ ಕುಡುಕತನ ಜಾಸ್ತಿಯಾಗುತ್ತದೆ ಅದರಲ್ಲಿ ಅನುಮಾನವೇ ಇಲ್ಲ. ಮಾನ್ಯ ಶ್ರೀನಿವಾಸ್‌ರವರು ಏನು ಒಂದು ರೆಸಲ್ಯೂಷನ್ ಅನ್ನು ತಂದಿದ್ದಾರೆ ಅದು ನಿಜವಾಗಿಯೂ ಸಹ ಶ್ಲಾಘನೀಯವಾದುದು. ಒಂದು ವೇಳೆ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ರಷ್ಯಾದೇಶದಲ್ಲಿ ಯಾವ ತರಹ ಒಂದು ಸ್ಟ್ರಾಂಡರ್ಡ್ ಕ್ವಾಲಿಟಿ ಲಿಕ್ಕರ್ ಇದೆ ಆ ರೀತಿ ಇಲ್ಲಿ ಮಾಡಬೇಕೆಂದು ನನ್ನ ಒಂದು ಅನಿಸಿಕೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀನಿವಾಸ್‌ರವರು ತಂದಿರತಕ್ಕಂತಹ ಈ ನಿರ್ಣಯ ಬಹಳ ಪ್ರಾಮುಖ್ಯವಾದಂಥಾದ್ದು. ನನ್ನ ಮಟ್ಟಿಗೆ ಹೇಳುವುದಾದರೆ ಇವರ ಈ ನಿರ್ಣಯ ೧೦೦ರಲ್ಲಿ ೧೦೦ರಷ್ಟು ಮಟ್ಟಿಗೆ ಈ ದೇಶವನ್ನು ಈ ರಾಜ್ಯವನ್ನು ಮುಂದೆ ಕೊಂಡು ಹೋಗತಕ್ಕಂಥಾದ್ದಕ್ಕೆ ಶಕ್ತಿಯನ್ನು ನೀಡತಕ್ಕಂತಹ ವ್ಯವಸ್ಥೆ. ಈ ನಿರ್ಣಯದಲ್ಲಿ ಇದೆ ಎಂದು ನಾನು ಭಾವಿಸಿದ್ದೇನೆ. ಮಹಾತ್ಮಾ ಗಾಂಧೀಜಿಯವರ ೫ ಸೂತ್ರಗಳಲ್ಲಿ ಪಾನ ನಿಷೇಧವೂ ಒಂದಾಗಿದೆ. ಮಾನ್ಯ ವೆಂಕಟರಾವಯ್ಯನವರು ಹೇಳಿದ ಹಾಗೆ ಸಂಪೂರ್ಣವಾಗಿ ಪಾನ ನಿಷೇಧವನ್ನು ಜಾರಿಗೆ ತಂದರೆ ಮಾತ್ರ ನಾವು ಉಳಿಯಲಿಕ್ಕೆ, ಬೆಳೆಯಲಿಕ್ಕೆ ಸಾಧ್ಯ. ಪಾನ ನಿಷೇಧವನ್ನು ಮಾನ್ಯ ರಾಜಾಜಿಯವರು ಇರುವಾಗ ಮಾಡಿದರು. ಆದು ಬಹಳ ಒಳ್ಳೆಯ ರೀತಿಯಲ್ಲಿ ಇತ್ತು. ಆದರೆ ನಮ್ಮ ರಾಜ್ಯದಲ್ಲಿ ಆದನ್ನು ತೆಗೆದರು. ಬಡವರು, ಪರಿಶಿಷ್ಟ ವರ್ಗದವರು, ಕಷ್ಟದಲ್ಲಿರತಕ್ಕಂತಹ ಜನರು ಹಾಳಾಗಿ ಹೋಗುವುದನ್ನು ತಡೆಯಬೇಕಾದರೆ ಮಾನ್ಯ ಶ್ರೀನಿವಾಸ್‌ರವರು ತಂದಿರುವ ನಿರ್ಣಯದ ಕಡೆಗೆ ನಮ್ಮ ಲಕ್ಷ್ಯವನ್ನು ಕೊಡೋಯ್ಯಬೇಕು. ಆ ರೀತಿಯಲ್ಲಿ ನಾವು ಮಾಡುತ್ತಿಲ್ಲ. ಇಲ್ಲವೇ ಜಡ್ಡನ್ನು ಕಡಿಮೆ ಮಾಡುವಂತಹ ಸೆಕೆಂಡ್ಸ್ ಅನ್ನು ಮಾಡಬೇಕು. ಪರಿಶಿಷ್ಟ ವರ್ಗದವರಿಗೆ ಹೇಳುತ್ತಾರೆ ನಿಮ್ಮ ಅಭ್ಯುದಯಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಆದರೆ ಅವರು ಎರಡು ಕೋಟಿ ರೂಪಾಯಿಯಷ್ಟನ್ನು ಕುಡಿಯುತ್ತಾರೆ. ಈಗ ಹೆಚ್ಚು ಶೇಂದಿ ಅಂಗಡಿ ಉಂಟು, ಬಡವರು ಕಷ್ಟದಲ್ಲಿರತಕ್ಕಂತಹವರು ಯಾರು ಇದ್ದಾರೆ ಅವರಿಂದ ಎರಡು ಕೋಟಿ ರೂಪಾಯಿಗಳು ಬರುತ್ತದೆ. ಒಂದು ಕೋಟಿ ರೂಪಾಯಿ ನಿಮಗೆ ಇಟ್ಟಿದ್ದೇವೆಂದು ಉಪಕಾರ ಮಾಡಿದ್ದೇವೆಂದು ಹೇಳತಕ್ಕಂತಹ ಪರಿಸ್ಥಿತಿ ಇದೆ. ಅಲ್ಪ ಸಂಖ್ಯಾತರಲ್ಲಿ ಮುಸಲ್ಮಾನರಲ್ಲಿ ೧೦೦ಕ್ಕೆ ೧೦೦ರಷ್ಟು ವಿರೋಧ ಇತ್ತು. ಮೊಹಮದ್ ಪೈಗಂಬರರು ಬರುವುದಕ್ಕೆ ಮೊದಲು ಬಹಳ ಕುಡಿಯುತನ ಇತ್ತು, ಕುಡಿದು ಅನ್ಯಾಯ ಮಾಡತಕ್ಕಂತಹ ಆ ಪ್ರದೇಶದಲ್ಲಿ ಕುರಾನ್ ಬಂದ ಮೇಲೆ ಪೈಗಂಬರರು ಕುಡಿಯಬಾರದೆಂದು ಹೇಳಿದ ಮೇಲೆ ಕುಡಿದವನಿಗೆ ಮರಣದಂಡನೆ ವಿಧಿಸುತ್ತಿದ್ದರು. ಈಗಲೂ ಸೌದಿ ಅರೇಬಿಯಾದಲ್ಲಿ ಮಾರ್ಗದ ಮಧ್ಯದಲ್ಲಿ ನಿಲ್ಲಿಸಿ ೧೫೦ ಚಡಿ ಏಟು ಹಾಕುತ್ತಾರೆ. ಈ ದೇಶದಿಂದ ಹೋದವರೂ ಕೂಡಾ ಅಲ್ಲಿ ಕುಡಿಯಲಿಕ್ಕೆ ಹೆದರುತ್ತಾರೆ. ಇದಕ್ಕೆ ನಾವು ಉಗ್ರವಾದ ಕಾನೂನನ್ನು ಮಾಡಬೇಕು. ಇದರಿಂದ ಕೋಟಿ ಕೋಟಿ ರೂಪಾಯಿಗಳು ಆದಾಯ ಬರುತ್ತದೆ ಎಂದು ಸರ್ಕಾರ ಹೇಳುತ್ತದೆ. ಪಾಪದಲ್ಲಿ ಬರತಕ್ಕಂಥ ಈ ಕೋಟಿ ಕೋಟಿ ರೂಪಾಯಿಗಳ ಸರ್ಪರನ್ನೂ ಪಾಪಿಗಳನ್ನಾಗಿ ಮಾಡುವುದು ಬೇಡ. ಮಹಾತ್ಮಾ ಗಾಂಧಿಯವರು ಹೇಳಿರತಕ್ಕಂಥ ಒಂದು ಸೂತ್ರ ಇವತ್ತು ನಮ್ಮೆಲ್ಲರನ್ನು ಆದು ನೈತಿಕ ಮಟ್ಟದಲ್ಲಿ ಕೊಂಡೊಯ್ಯುತ್ತದೆ ಎಂದರೆ ಆದು ಈ ಪಾನನಿರೋಧವನ್ನು ನಿಷೇಧ ಮಾಡುವುದರಿಂದ ಮಾತ್ರ ಸಾಧ್ಯ. ಇದರಿಂದ ಕೋಟ್ಯಾನುಕೋಟಿ ರೂಪಾಯಿಗಳು ಬರುತ್ತದೆ, ಹೋಗುತ್ತದೆ. ಅನ್ಯಾಯದಲ್ಲಿ ಬರತಕ್ಕಂಥ ಪಾಪದಲ್ಲಿ ಬರತಕ್ಕಂಥ ದುಡ್ಡು ಆದು ಒಳ್ಳೆಯದಲ್ಲ. ಮದ್ಯವನ್ನು ಕುಡಿಯುವುದರಿಂದ ವಕೀಲರಾಗಲಿ, ಡಾಕ್ಟರಾಗಲಿ, ಇಂಜಿನಿಯರಾಗಲಿ, ಏ.ಎಲ್.ಎ. ಆಗಲಿ, ಮಂತ್ರಿಯಾಗಲಿ, ಕವಿಯಾಗಲಿ. ಅವನು ಹಾಳಾಗಿ ಹೋಗುತ್ತಾನೆ. ಪಾಪ ಮಾಡುತ್ತಾನೆ. ಅವನು ಕುಡಿಯುವುದನ್ನು ಬಿಟ್ಟಾಗ ಮಾತ್ರ ನಾನು ಮಾಡಿದ್ದುದು ತಪ್ಪು ಎಂದು ಅವನಿಗೆ ಆಗ ಕಾಣುತ್ತದೆ. ಆದ್ದರಿಂದ ಶ್ರೀಯುತ ಶ್ರೀನಿವಾಸ್ ಅವರು ತಂದಿರತಕ್ಕಂಥ ಪಾನ ನಿಷೇಧದ ಬಗ್ಗೆ ಬೇರೆ ಸಮಿತಿಯನ್ನು ಮಾಡಲೇಬೇಕು ಮತ್ತು ಈಗ ಗಲ್ಲಿ ಗಲ್ಲಿಯಲ್ಲಿ ಎಲ್ಲಾ ಕಡೆ ಲೈಸೆನ್ಸ್‌ಗಳನ್ನು ಕೊಟ್ಟುಬಿಟ್ಟಿದ್ದೀರಿ. ಗಲ್ಲಿ ಗಲ್ಲಿಯಲ್ಲಿಯೂ ಶೇಂದಿ ಅಂಗಡಿಗಳನ್ನು ಕಾಣುತ್ತಿದ್ದೇವೆ. ಇದನ್ನು ತಪ್ಪಿಸುವಂತೆ ಪ್ರಯತ್ನ ಆಗಬೇಕೆಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮತ್ತು ರಾಜ್ಯಕ್ಕೆ ದೇವರಲ್ಲಿ ಅಭ್ಯುದಯ ಆಗ ನೈತಿಕ ಮಟ್ಟಕ್ಕೆ ಏರಲಿ. ಶ್ರೀಯುತ ಶ್ರೀನಿವಾಸ್ ಅವರು ತಂದಿರತಕ್ಕ ಈ ನಿರ್ಣಯದ ಕಡೆ ಗಮನ ಹರಿಸಬೇಕು ಎಂದು ಹೇಳಿ ಇಷ್ಟು ಹೊತ್ತು ಅವಕಾಶವನ್ನು ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇದಿನ ಸಭೆಯು ಇಲ್ಲಿಗೆ ಮುಕ್ತಾಯಗೊಂಡಿತು, ಮತ್ತೆ ಸೋಮವಾರ ೧೧ ಗಂಟೆಗೆ ಸೇರೋಣ.

(ಸಭೆಯು ೧–೫೫ಕ್ಕೆ ಮುಕ್ತಾಯಗೊಂಡು ಸೋಮವಾರ ದಿನಾಂಕ ೯–೨–೧೯೮೨ರಂದು ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.